"SATYAVADI" Founded 1917 Regd. No. M. 1299

ಸತ್ಯವಾದಿ

(ಅರಮನೆ ಪಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 11 | ಮಂಗಳವಾರ 25—9—45 | ಬಿಡಿ ಪ್ರತಿ 3 ಪೈ

ರಷಾಕೆ ತನ ಮಿತ್ರರ ಭಯ
ಶ ಕ ನ್ನ
ತನ್ನ ಹಿಂದಿನ ಶತ್ರುಗಳದ್ದಕ್ಕಿಂತ ಹೆಚ್ಚಾಗಿದೆ

ಎಂದು ಲಂಡನ್ ಸಂಡೇ ಅಬ್ಸರ್ವರ್ ಪತ್ರಿಕೆಯಲ್ಲಿ ಒಂದು ಲೇಖನ ತಿಳಿಸುತ್ತದೆ.

ಎ.ಐ.ಸಿ.ಸಿ. ಅಧಿವೇಶನ

(ನಮ್ಮ ಖಾಸಾ ಪ್ರತಿನಿಧಿಯಿಂದ)

ಬಂಬಯಿ ಸೆ 22

ಈ ದಿನ ಲಾಡ್ ಸ್ಪೀಕರು ತೊಂದರೆಯಿಲ್ಲದೆ ಮಧ್ಯಾಹ್ನ 2 ಘಂಟೆಯಿಂದ ರಾತ್ರಿ 8 ರವರೆಗೆ ಒಂದೇಸಮನೆ ಕಾರ್ಯ ಕಲಾಪಗಳು ಜಯಪ್ರದವಾಗಿ ನಡೆದವು ಒಮ್ಮೇ ಪಟೇಲರೂ (ಜಾದರ್ ಗೈರು ಹಾಜರಿನಲ್ಲಿ) ಅಧ್ಯಕ್ಷಪೀಠವನ್ನಲಂಕರಿಸಿದ್ದರು. ಸಭೆಯು 4—30 ರಿಂದ 5 ರತನಕ ಮಾತ್ರ ಉಪಾಹಾರಕ್ಕಾಗಿ ಎದ್ದಿತ್ತು.

42 ರ ಹೋರಾಟ ಮತ್ತು ಅದು ಪರಿಣಾಮವನ್ನು ಕುರಿತ ತಠಾವು ಜವಹರಲಾಲರಿಂದ ಮಂಡಿಸಲ್ಪಟ್ಟು ಸಭೆಯು ಒಪ್ಪಿಗೆ ಪಡೆಯಿತು.

ಕಾಂಗ್ರೆಸ್ ನೀತಿ ನಿರ್ಣಯ ಕುರಿತು ತಠಾವು ಜನರಲ್ ಸೆಕ್ರಿಟರಿಯವರಿಂದ ಮಂಡಿಸಲ್ಪಟ್ಟು ಸಭೆ ಒಪ್ಪಿಗೆ ಪಡೆಯಿತು. ಈ ದಿನ ಎ. ಐ. ಸಿ. ಸಿ. ಸದಸ್ಯರ ಪೈಕಿಯುವಕರಾದ ಮಿಶ್ರರು ಭಾಷಣ ಬೆಳೆಸುತ್ತಿದ್ದಾಗ ತಡೆಗಟ್ಟಲ್ಪಟ್ಟರು. ಅವರು ಮಾತನಾಡುತ್ತಿದ್ದುದೇನೆಂದರೆ— ಗಾಂಧೀಜೀ 125 ವರ್ಷ ಬದುಕುತ್ತೀನೆಂತ ಹೇಳಿದಾರೆ. ಅದು ಹ್ಯಾಗೋ ಏನೋ? ಆಯುಸ್ಸಿದ್ದಷ್ಟು ಬದುಕುತ್ತಾರೆ. ಅವರ ದಾರಿ ಹಿಡಿದು ನಡೆಯೋದು ನಮ್ಮ ಕರ್ತವ್ಯ— ಮುಂತಾಗಿ ಹೇಳಿದರು.

ಮೌಲಾನಾ ಸಹರುಲ್ಲಾಖಾನರು ಭಾಷಣ ಮಾಡುತ್ತಾ, ಕಾಂಗ್ರೆಸ್ ಸ್ವರಾಜ್ಯ ಸಂಪಾದಿಸಿ ತನಗೊಪ್ಪಿಸಿ ಇಟ್ಟು ಕೊಳ್ಳುವುದಿಲ್ಲ ಜನರಿಗೇ ಕೊಡುತ್ತೆ. ಇದಿಷ್ಟಕ್ಕೆ ಭಿನ್ನ ಭಾವ. ನಮ್ಮೆಲ್ಲರಲ್ಲೇ ಕಲಹಕದನಗಳ್ಯಾತಕ್ಕೆ ಎಂದು ಒತ್ತಿ ಹೇಳಿದರು.

ಇಂದು ಆರಂಭದಿಂದ ಮುಕ್ತಾಯವಾಗುವವರೆಗೂ ಮಳೆ ಸ್ಥಿರವಾಗಿ ಸುರಿಯುತ್ತಲಿತ್ತು. ಆದರೂ ಜನರ ಮತ್ತು ಹೊರಗಡೆ ಧುರಂಧರ ನೈದಾನ ಭರ್ತಿಯಾಗಿತ್ತು. ಎಲ್ಲೆಲ್ಲೂ ಬರೀ ಬಿಚ್ಚಿದ ಛತ್ರಿಗಳೇ ಕಾಣುತ್ತಿದ್ದುವು.

ಮಹಾವೀರತ್ಯಾಗಿಗಳು ಠರಾವೊಂದನ್ನು ಏರೋಧಿಸುತ್ತಾ ಮಾತನಾಡುತ್ತಿದ್ದಾಗ ಪೈಕ್ ಸಮೀಪಕ್ಕೆ ಬರಲಾಗಿ ಜವಹರಲಾಲ್‌ರು ಅವರನ್ನು ಹಿಂದಕ್ಕೆ ಎಳದರು. ಆಗ ತ್ಯಾಗಿಗಳು; ನಾನು ಮಿತಿಮೀರಿ ಮಾತ್ನಾಗಿದ್ದೆ, ನನ್ನ ನಾಯಕರು ಕಾಲವರಿತು ಹಿಂದಕ್ಕೆ ಸೆಳೆದಿದ್ದಾರೆ. ರಾಜಕೀಯ ರಂಗಗಳಲ್ಲೂ ಅವರು ಹಾಗೆ ಮಾಡುವುದೂ ನಿಮಗೆ ಗೊತ್ತೇ ಇದೆ, ಎಂದು ಹೇಳಿ ಎಲ್ಲರನ್ನೂ ನಗಿಸಿದರು.

ಪ್ರೊ || ರಂಗಾರವರು ತಮ್ಮ ಪ್ರಾಂತ್ಯದ ಕಿಸಾನರು ಕಳುಹಿಸಿದ್ದ ಹಾತವನ್ನು ಅಧ್ಯಕ್ಷರಿಗೆ ಅರ್ಪಿಸಿದರು.

ಆಹಾರಾರ್ ಯೋಧರು ತಮ್ಮ ಬಾವುಟ ಸಮೇತ ವೇದಿಕೆ ಬಳಿಗೆ ಬಂದು ಜವಹರರನ್ನು ವಂದಿಸಿ ಹಿಂದಿರುಗಿದರು.

ಮದರಾಸಿನಲ್ಲಿ ಈ ವರ್ಷ ಜರುಗುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಶ್ರೀ ಟಿ. ಪಿ ಕೈಲಾಸಂರವರು ಅಧ್ಯಕ್ಷರಾಗುವರೆಂದು ತಿಳಿಯುಬಂದಿದೆ.

o o

ಲಂಡನ್ ಸೆ 16— ಪ್ರಥಮ ಜನರಾಲ್ ಸೈಸರ ಸೇನಾನಿ ಜನರಲ್ ಕೆನ್ನೆ ಡೊಯಿನಾರವರನ್ನು ಡಸ್ಕಗರಿ ಮಾಡಲು ಮೆಕ್ಕಾರ್ಥರರ ಆಜ್ಞೆಯಾಗಿದೆ.

ರಾಜಧಾನಿಯ ನೀರಿನ ಸಮಸ್ಯೆ
ಪೌರಸಭಾ ವಿಶೇಷ ಅಧಿವೇಶನ

ಮೈಸೂರು, ಸೆ 25

ಕಳೆದ ಸುಜೆ ಐದೂವರೆ ಘಂಟೆಗೆ ಶ್ರೀ ರಾಮಚಂದ್ರರಾವ್ ಬಾಂಭೋರೆಯವರ ಅಧ್ಯಕ್ಷತೆಯಲ್ಲಿ ರಾಜಧಾನಿಯಲ್ಲುಂಟಾಗಿರುವ 'ನೀರಿನ ತೊಂದರೆ' ಯನ್ನು ಕುರಿತು ಚರ್ಚಿಸಲು ವಿಶೇಷ ಅಧಿವೇಶನವು ಕರೆಯಲ್ಪಟ್ಟಿದ್ದಿತು. ನೀರಿನ ಮೇಲ್ವಿಚಾರಕರಾದ ಶ್ರೀ ಗರುಡಧ್ವಜರು ಸಭೆಗೆ ಆಗಮಿಸಿದ್ದರು

ಅನುತಾಪ

ಸೇಠ್ ಮೋಹರ್‌ದಾಸ್ ತುಳುಸಿದಾಸ್ ನಿಧನದ ಪ್ರಯುಕ್ತ ಅನುತಾಪ ಸೂಚಿಸಲು ಸಭೆಯು ಒಂದು ನಿಮಿಷಗಳ ಕಾಲ ಮೌನತಾಳಿದ್ದಿತು. ಶ್ರೀ ನಾರಾಯಣಸ್ವಾಮಿಯವರಿಂದ ಈ ಠರಾವು ಮಂಡಿಸಲ್ಪಟ್ಟಿದ್ದಿತು.

ಸಭೆ ಉದ್ದೇಶ

ಸಭೆ ಸೇರಿದ ಉದ್ದೇಶವನ್ನು ಶ್ರೀ ನಾರಾಯಣ ಸ್ವಾಮಿಯವರು ವಿವರಿಸಿದರು; ತೊಂದರೆಯ ನಿವಾರಣೆಯು ತ್ವರಿತದಲ್ಲಿಯೆ ಆಗಬೇಕೆಂದರು.

ಕಾಂಗ್ರೆಸ್ ಪಕ್ಷದ ಏಕ ಕೂಗು

ರಾಜಧಾನಿಯಲ್ಲಿ ನೀರಿನ ತೊಂದರೆ ಅಧಿಕವಾಗಿದೆ. ಕೆಲವು ಮನೆಯಲ್ಲಿ ನೀರು ಸರಬರಾಜಾದರೆ, ಕೆಲವು ಮನೆಯಲ್ಲಿ ನೀರು ಸರಬರಾಜಿಲ್ಲ. ಕೆಲವೆಡೆ ಸ್ವಲ್ಪಕಾಲ ನೀರು ಬಂದರೆ, ಹಲವೆಡೆ ಅಲ್ಪ ಕಾಲವೂ ನೀರು ತೊಟ್ಟಿಲ್ಲ. ಹೋಟಲುಗಳಲ್ಲಂತೂ ಮತ್ತು ಸರ್ಕಾರಿ ಅಧಿಕಾರಿಗಳ ಮನೆಗಳಲ್ಲಿಯೂ ನೀರು ಯಾವಾಗ ನಿಂತಿದೆ? ಈ ಕಷ್ಟಗಳೆಲ್ಲಾ ಬಡವರಿಗೆ ಬಂದಿರುವುದು! ಪ್ರತಿಯೊಬ್ಬ ಮತದಾರನಿಗೂ ಸಮಾನವಾದ ಹಕ್ಕಿರಬೇಡವೆ? ನೀರು ಸರಬರಾಜಾಗದಿದ್ದ ದಿವಸಗಳನ್ನು ಎಣಿಸಿಕೊಂಡು ಕಂದಾಯವನ್ನು ಕಡಿಮೆ ತೆಗೆದುಕೊಳ್ಳಲಾಗುವುದೇ? ಕಂದಾಯಕ್ಕಾಗಿ ಮಾತ್ರ ನೋಟಿಸ್ ತಪ್ಪದೆ ನಿಗದಿಯಾದ ತಾರೀಖಿಗೆ ತಲವುವುದು. ನೀರು ದುರುಪಯೋಗವಾಗುತ್ತಿರುವುದನ್ನು ಸಂಬಂಧಿಸಿದ ಅಧಿಕಾರಿಗಳು ಗಮನಿಸಿರುವರೇ? ವಾಣೀವಿಲಾಸ ರಿಸರ್ವಾಯರ್ ಬಳಿ ಪಂಪು ಒಡೆದು ನೀರು ಕೋಡಿ ಹರಿಯುತ್ತಿರುವುದನ್ನು ನೋಡಿರುವರೇ? ತುದ್ದ ಮಾಡಲ್ಪಟ್ಟ ನೀರು ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಅನಾನಶ್ಯಕವಾಗಿ ಸುರಿಯುತ್ತಿರುವುದು ಕಂಡು ಬಂದಿದೆಯೇ? ನೀರಿಗಾಗಿ ಕೆಂಗಪರು ಕಂಕುಳಲ್ಲಿ ಚಿಂದಿಗೆಯುನ್ನು ಇರುಕಿಕೊಂಡು ಯಾತ್ರೆ ಮಾಡಬೇಕಾದ ದುರವಸ್ಥೆಯು ಬಂದಿರುವುದು ನೀರು ಹೆಚ್ಚು ಖರ್ಚಾಗುವ ಮನೆಗಳಿಗೆ ಮೂಟರುಗಳನ್ನು ಇಡಿ. ಬೆಂಗಳೂರಿನಲ್ಲಿ ನೀರಿಗೆ ಇಲ್ಲಿನಷ್ಟು ಅಭಾವವಾಗಿರುವುದಿಲ್ಲ. ರಾಜಧಾನಿಯಲ್ಲಿಯೇ ಹೀಗಾದರೆ ಗತಿ ಏನು? ಆದರಲ್ಲೂ ದಸರ ಸಮೀಪಿಸುತ್ತಿದೆ. ನೀರಿನ ಮೇಲ್ವಿಚಾರಕರು ದಸರ ಮುಕ್ತಾಯವಾಗುವವರೆವಿಗಾದರೂ ಈ ಸ್ಥಳದಿಂದ ವರ್ಗವಾಗದೇ ಪರಿಸ್ಥಿತಿಯನ್ನು ತಹಬಂದಿಗೆ ತರಲಿ. ಹೊಸಬರು ಬಂದರೆ ಪ್ರಾರಂಭದಿಂದ ಪಾಠ ಕಲಿಸಬೇಕಾದೀತು. ಈಗ ಒದಗಿರುವ ನೀರಿನ ತೊಂದರೆಯನ್ನು ಕೂಡಲೇ ತಪ್ಪಿಸಬೇಕು.

ನಮ್ಮ ಗೋಳು ಕೇಳಿ

ನಿಮ್ಮ ವರ್ಗದವರಿಗೆ ನೀರೇ ಇಲ್ಲವಾಗಿದೆ. ನೋಡಲು ಈ ಕಷ್ಟ ಪರಿಹಾರವಾಗಲಿ. ಆದಿಕರ್ನಾಟಕವರದಿಂದ ನೀರಿಗಾಗಿ ನಮ್ಮ ಹೆಂಗೆಸರು ಹಾರ್ಡ್‌ವಿಕ್ ಕಾಲೇಜಿಗೆ ಬರಬೇಕು? ಕುಕ್ಕರಹಳ್ಳಿ ಮತ್ತು ಕಾರಂಜಿ ಕೆರೆಗಳಿಗೆ ಹೋಗುವ ಸಂಭವ ಬರಬಹುದು. ಸ್ನಾನೇತ್ಯಾದಿಗಳನ್ನು ಕೆರೆಯಲ್ಲಿ ಮುಗಿಸಿಕೊಂಡಾಗ್ಯೂ ಹತ್ತು ಕೊಡ ನೀರಾದರೂ ಇತರ ಕಾರ್ಯಗಳಿಗೆ ಬೇಡವೇ? ಅಂತು ನಮ್ಮ ಕಷ್ಟ ಪರಿಹರಿಸಿ — ಎಂದರು ಸಿದ್ಧಯ್ಯನವರು.

ಈ ಕಡೆ ಸ್ವಲ್ಪ ಗಮನಿಸಿ

ಎತ್ತರ ಪ್ರದೇಶಗಳಿಗೆ ನೀರು ಹತ್ತುವುದು ಬಹಳ ಕಷ್ಟ. ಆದುದರಿಂದ ಕೆಲವೆಡೆ ನೀರು ಸ್ವಲ್ಪ ಹೊತ್ತೂ ಸರಬರಾಜಾಗದೆ, ಹಲವೆಡೆ ಇಪ್ಪತ್ನಾಲ್ಕು ಘಂಟೆಯೂ ಸರಬರಾಜಾಗುತ್ತಿದೆ. ಕೆಲವು ಸಾರಿ ಕಂಪ್ಲೆಂಟುಗಳು ಬಂದಾಗ ನಾನೇ ಮೊಕ್ಕಾಹೋಗಿ ಪರೀಕ್ಷಿಸಿದ್ದೇನೆ. ಬೆಳಗೊಳದಿಂದ ನೀರು ಬರುವುದು ಕಮ್ಮಿಯಾಗಿದೆ. ಅದಕ್ಕಾಗಿ ಮತ್ತೊಂದು ಪಂಪು ಬೇಕೆಂದು ಕೇಳಿದ್ದೇವೆ — ಎಂದು ನೀರಿನ ಮೇಲ್ವಿಚಾರಕರಾದ ಶ್ರೀ ಗರುಡಧ್ವಜರು ಉತ್ತರವಿತ್ತರು.

ರಂಜಾನ್ ದಿನ ನಮ್ಮ ಕಷ್ಟ ಬಲ್ಲಿರಾ?

೯ ಮತ್ತು ೧೦ ನೇ ತಾರೀಖುಗಳಲ್ಲಿ ನಮ್ಮ ಕಡೆ ನೀರು ಸರಬರಾಜಿಗೆ ಸರ್ಕಾರ. ರಂಜಾನ್ ಹಬ್ಬದ ದಿವಸ; ನಮಗೆ ಕಷ್ಟವೆಷ್ಟಾಯಿತೆಂಬುದನ್ನು ಬಲ್ಲಿರಾ? ನೀರಿನ ತೊಂದರೆ ಖಂಡಿತವಾಗಿಯೂ ತಪ್ಪಲೇ ಬೇಕು — ಎಂಬುದಾಗಿ ಅಹಮದ್ ಖಾನ್ ಸಾಹೇಬರು ಹೇಳಿದರು.

ನೀರಿನ ತೊಂದರೆ ಹೆಚ್ಚಾಗಿದೆ

ಮೊನ್ನೆಯ ದಿವಸ ಅರು ಘಂಟೆಗಳ ಕಾಲ ನಿಲ್ಲಬೇಕೆಂದಿದ್ದ ನೀರು ಬೆಳಿಗ್ಗೆ ಕಡೆ ಇಡೀ ದಿವಸವೇ ನಿಂತು ಹೋಯಿತು. ನೀರಿನ ತೊಂದರೆ ತಪ್ಪಿಸುವ ಸ

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಪದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಟಿತ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಹಿಂ ಗುಯಿತಿನ ಈಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಈಸರಿ ಮತ್ತು ಕಿರಾಣ ವ್ಯಾಪಾರಿಗಳು)

ದಳಿ. ಗೋವಿಂದಪ್ಪ ಪಾಯಕ್ ರಸ್ತೆ, ಜಿ. ಟಿ. ಮದರಾಸು.

ಲುವಾಗಿ ಸರ್ವಾಧಿಕಾರಿಯೊಬ್ಬನನ್ನು ನೇಮಿಸಿದೆ. ಸಭೆಯಲ್ಲಿಯೇ ಅದು ಆಗುವುದು. ಈ ವಿಷಯವೆಲ್ಲ ನನ್ನಿಂದ ಹಸ್ತಾಂತರವಾಗಿದೆ' ಎಂದು ಕಣ್ಣೀರು ತುಳುಕುತ್ತಿದ್ದ ಕಂಗಳಲ್ಲಿ ಚಿಂದಿಗೆಯನ್ನು ಇರಿಸಿಕೊಂಡು ಹೋಗುತ್ತಿದ್ದುದನ್ನು ನಾನು ನೋಡಿರುವೆನು ವೈಸೂಲಿಗೆ ಐದು ಮಿಲಿಯ ಗ್ಯಾಲನ್ ನೀರು ಬೇಕೆಂದು ಕೇಳಿಕೊಳ್ಳಲಾಗುತ್ತಿದೆ. ಈಗ ನಾಲ್ಕು ಕಾಲು ಮಿಲಿಯ ಗ್ಯಾಲನ್ ನೀರು ಕೊಡಲ್ಪಟ್ಟಿದೆ. ಆದರೆ ಅದಸ್ಟೂ ಉಪಯೋಗವಾಗುತ್ತಿಲ್ಲ. ಕಾರಣ: ತಗ್ಗಾದ ಪ್ರದೇಶಕ್ಕೆ ನೀರು ಹರಿಯುವುದಿಲ್ಲ — ಎಂದು ಅಧ್ಯಕ್ಷರು ತಿಳಿಸಿದರು.

'ಹಾಲಿ ಪರಿಸ್ಥಿತಿ ಬಗ್ಗೆ ತೀರ್ಮಾನವೇನು' ಎಂದು ಅಹ್ಮದ್ ಖಾನ್ ಸಾಹೇಬರು ಪ್ರಶ್ನಿಸಿದರು.

'ವೇಲ್ವಿಚಾರಿಕರಿಗೆ ತಿಳಿಸಲಾಗಿದೆ. ಅವರು ಸಂಯಾದ ವ್ಯವಸ್ಥೆ ಮಾಡುವರು ಎಂದು ಅಧ್ಯಕ್ಷರು ಉತ್ತರಿಸಿದರು.

ಶ್ರೀ ಬಿ ನಾರಾಯಣಶಾಸ್ತ್ರಿಯವರು 'ಕೂಡಲೇ ನೀರಿನ ತೊಂದರೆ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕು' ಎಂಬ ಠರಾವನ್ನು ಮುಂದಿಟ್ಟರು.

ತಾವನ್ನು ಅನುಮೋದಿಸುತ್ತಾ ಶ್ರೀ ಅಗರಂ ರಂಗಯ್ಯನವರು 'ತೊಂದರೆಯಿರುವ ಸ್ಥಳದಿಂದ ಫೋನ್ ಮಾಡಿದರೆ ಎಂಗೇಜ್ಡ್, ಇಲ್ಡಿಪ್ರೆ ಸಾಹೇಬ್ರಿಲ್ಲ ಬುದ್ಧಿ ಎಂದು ತಿಳಿಸಲ್ಪಡುತ್ತೆ. ವೇಳಾಕ್ರಮದಲ್ಲಾದರೂ ತಪ್ಪದೆ ನೀರು ಬಿಡಗಿಸಿ. ನೀರು ನಿಲ್ಲುವ ಬಗ್ಗೆ ಒಂದು ದಿನ ಮುಂಚಿತವಾಗಾದರೂ ತಿಳಿಸಬೇಕು' ಎಂದರು. ೭ ಘಂಟೆಗೆ ಸಭೆ ಮುಗಿಯಿತು.

ಇಂ. ಚೀನಾದಲ್ಲಿ ಭಾ. ದಳಗಳು

ಸೈಗಾಂ — 30 ನೇ ಭಾ. ದಳಗಳು ಸೈಗಾನಿಗೆ ಬಂದು ತಲಪಿವೆ. ಯುನಾನ ಸಿಚ್ವಾಣದಲ್ಲಿದ್ದ ಜಪಾನಿಗಳನ್ನು ಅಧಿಕಾರದಿಂದ ನಿವೃತ್ತಿಮಾಡಿವೆ. ಈ ದಳಗಳು ಕಳೆದ್ಯ ಯುದ್ಧದಲ್ಲಿ ವಿಶೇಷ ಶೌರ್ಯ ಪಡೆದು ಬರ್ಮಾ ಕದನದಲ್ಲಿ ಎರಡು ಸಾರಿ ಧೈರ್ಯದಿಂದ ಹೋರಾದಿದವು. 1942 ರಿಂದ ಜಪಾನ್ ಶರಣಾಗತಿಯವರೆಗೆ ಬರ್ಮಾದಲ್ಲಿ ಯುದ್ಧ ಮಾಡಿದವು.

.....

ಸಿಂಗಪುರದಲ್ಲಿ ಜಪಾನರನ್ನು ಓಡಿಸಿದನಂತರ ಇದೇ ಸ್ಥೂಡಬಾಗಿ ತಾ॥ 6 ರಲ್ಲಿ 8 ಬ್ಯಾಂಕುಗಳು ತೆರೆಯಲ್ಪಟ್ಟವು ಇವುಗಳಲ್ಲೆರಡು ಭಾರತೀಯವು, ಹಿಂದಿನ ಸಾಲಿಗಳಿಗೆಲ್ಲ ಪಾಯಿದೆ ಕೊಟ್ಟು ವ್ಯವಹಾರ ಆರಂಭವಾಗಿದೆ.

☞ EVENING SHOWS

From 26-9-45

AT Opera—

Ali Baba & Forty Thieves

(in Technicolor)

Featuring—

MARIA MONTEZ
JON HALL
TURHAN BEY

Daily 3 Shows



At Ranjit

Humayun

3 ನೇ ವಾರ

ರಣಜಿತ್ ಟಾಕೀಸಿನಲ್ಲಿ

ಮೆಹಬೂಬ್ ರವರ

... ಹುಮಾಯೂನ್....

(ಹಿಂದಿ)

ಅಶೋಕ ಕುಮಾರ್, ಚಂದ್ರಮೋಹನ್
ವೀಣಾ, ನರ್ಗಿಸ್, ಷಾನವಾಸ್
ಪಾತ್ರವಹಿಸಿರುವರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore